ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 1, Jul-Aug 2020, 106-113
©*IIMRD*, Mysuru
www.iimrd.com

# ಪರಿಶಿಷ್ಟ ಜಾತಿ ಸಮುದಾಯದ ಸಬಲೀಕರಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಪಾತ್ರ

**ಕುಮಾರಸ್ವಾಮಿ ಸಿ[1] ಮತ್ತು ಪ್ರೊ. ಜೆ.ಸೋಮಶೇಖರ್[2]**

**ಪೀಠಿಕೆ**

ಭಾರತ ದೇಶವು ಪ್ರಪಂಚದಲ್ಲಿಯೇ ಅತ್ಯುತ್ತಮವಾದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ದೇಶವು ವಿವಿಧ ಬಗೆಯ ಧರ್ಮ, ಸಂಸ್ಕೃತಿ, ಭಾಷೆ, ಆಚಾರ–ವಿಚಾರ, ರೂಢಿ–ಸಂಪ್ರದಾಯ, ಹೀಗೆ ವಿಶೇಷ ಹಾಗೂ ವಿಭಿನ್ನತೆಯ ಅಂಶಗಳನ್ನು ಒಳಗೊಳ್ಳುವ ಮೂಲಕ ವಿವಿಧತೆಯತಲ್ಲಿ ವೈವಿಧ್ಯತೆಯನ್ನು ಹೊಂದಿದ ರಾಷ್ಟ್ರವಾಗಿ ಹೊರಹೊಮ್ಮಿದೆ. ಇಂತಹ ರಾಷ್ಟ್ರದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮುಂತಾದ ಕ್ಷೇತ್ರದಲ್ಲಿ ಪ್ರತಿಯೊಬ್ಬ ಪ್ರಜೆಯೂ ಸರ್ವಾಂಗೀಣ ಅಭಿವೃದ್ಧಿ ಕಾಣಬೇಕಾಗಿದೆ. ಸ್ವಾತಂತ್ರ್ಯ ನಂತರದ ಭಾರತವನ್ನು ಪ್ರಜಾಪ್ರಭುತ್ವ ರಾಷ್ಟ್ರವನ್ನಾಗಿಸುವಲ್ಲಿ ಶ್ರಮಿಸಿದ ಶ್ರೇಯಸ್ಸು, ಕೀರ್ತಿ, ಸಾಮಾಜಿಕ ನ್ಯಾಯದ ರೂವಾರಿ ಮಹಾನ್ ಮಾನವತವಾದಿ, ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಅಂಶಗಳ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವದ ಆಶಯಗಳು ಈಡೇರಬೇಕಾಗಿದೆ ಎಂಬುದನ್ನು ಮನಗಂಡಿದ್ದವರು ಬಾಬಾ ಸಾಹೇಬ್ ಅಂಬೇಂಡ್ಕರ್. ಹಾಗಾಗಿ ಅಸಮಾನತೆಯಿಂದ ಕೂಡಿರುವ ಸಮಾಜದ ಕಟ್ಟಕಡೆಯ ವ್ಯಕ್ತಿಯಿಂದ ಮೇಲ್ಮಟ್ಟದ ವ್ಯಕ್ತಿಯವರೆಗೂ ಎಲ್ಲರೂ ಸಮಾನರು ಎಂಬ ಭಾವನೆ ಪ್ರತಿಯೊಬ್ಬರಲ್ಲೂ ಬರಬೇಕೆಂಬ ಸಮಾಜಿಕ ಕಳಕಳಿ ಅವರಲ್ಲಿತ್ತು. ಆ ಕಾರಣಕ್ಕಾಗಿ ಅನೇಕ ಅಂಶಗಳನ್ನು ಸಂವಿಧಾನದಲ್ಲಿ ಅಳವಡಿಸುವಲ್ಲಿ ಬಿ.ಆರ್.ಅಂಬೇಡ್ಕರ್‌ರವರು ಸಫಲರಾಗಿದ್ದಾರೆ.

ಭಾರತ ಸ್ವಾತಂತ್ರ್ಯ ನಂತರ ಆಳುವ ಸರ್ಕಾರಗಳು ರಾಷ್ಟ್ರದ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿ ಆ ಮೂಲಕ ಪ್ರಗತಿಯನ್ನು ಸಾಧಿಸಲು ಮುಂದಾಗಿದ್ದಾರೆ. ಕರ್ನಾಟಕ ಸರ್ಕಾರವೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಸರ್ವತೋಮುಖ ಅಭಿವೃದ್ಧಿಗೆ ನಿಗಮವನ್ನು 1975ರಲ್ಲಿ ಸ್ಥಾಪಿಸಿ 2005ರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಎಂದು ನಾಮಕರಣ ಮಾಡಲ್ಪಟ್ಟಿದೆ. ಈ ನಿಗಮದ ಮೂಲಕ ಈ ವರ್ಗದವರ ಸಬಲೀಕರಣಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತರಲಾಗಿದೆ.

[1] *ಸಂಶೋಧನಾ ವಿದ್ಯಾರ್ಥಿ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗು ವಿಸ್ತರಣಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ., ಮೈಸೂರು.*

[2] *ಪ್ರಾಧ್ಯಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗು ವಿಸ್ತರಣಾ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ., ಮೈಸೂರು.*

ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿಯವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಸಾಲ ಸೌಲಭ್ಯಗಳು ಮತ್ತು ಅನುದಾನಿತ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶ್ರಮಿಸುವುದೇ ನಿಗಮದ ಮುಖ್ಯ ಉದ್ದೇಶವಾಗಿದೆ.

**ಯೋಜನೆಗಳು**

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ತನ್ನದೇ ಆದ ಯೋಜನಗಳ ಮೂಲಕ ಪರಿಶಿಷ್ಟ ಜಾತಿಯವರ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಸ್ವಯಂ ಉದ್ಯೋಗ ಯೋಜನೆ, ಮೈಕ್ರೊ ಕ್ರೆಡಿಟ್ ಯೋಜನೆ, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಸಫಾಯಿ ಕರ್ಮಚಾರಿ ಯೋಜನೆ ಪ್ರಮುಖವಾಗಿವೆ.

**ಸ್ವಯಂ ಉದ್ಯೋಗ ಯೋಜನೆ**

ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವಕ/ಯುವತಿಯರು ಸಣ್ಣ ಕೈಗಾರಿಕೆ, ಸೇವಾ ಕ್ಷೇತ್ರ ಮತ್ತು ವ್ಯಾಪಾರಿ ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ನಿಗಮದ ಸಹಾಯಧನ ಮತ್ತು ಬ್ಯಾಂಕಿನ ಸಾಲ ವ್ಯವಸ್ಥೆಯೊಂದಿಗೆ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು. ಕೃಷಿಯಾಧಾರಿತ ಚಟುವಟಿಕೆಗಳು ಮೀನುಗಾರಿಕೆ, ಪಾನ್ ಅಂಗಡಿ, ಚಪ್ಪಲಿ ಅಂಗಡಿ, ಬ್ಯೂಟಿ ಪಾರ್ಲರ್, ಗೂಡಂಗಡಿ, ಪ್ಯಾನ್ಸಿ ಸ್ಟೋರ್, ಚಾಪೆ ತಯಾರಿಕೆ, ದಿನಸಿ ಅಂಗಡಿ, ಟೈಲರಿಂಗ್ ಶಾಪ್, ಹೈನುಗಾರಿಕೆ, ಬುಟ್ಟಿ ಹೆಣೆಯುವುದು, ರೆಡಿಮೇಟ್ ಗಾರ್ಮೆಂಟ್ಸ್, ಮೊಬೈಲ್ ದುರಸ್ಥಿ, ಹೀಗೆ ಹಲವಾರು ಉಪಯೋಗಗಳು ಈ ಯೋಜನೆಯಲ್ಲಿ ದೊರೆಯುತ್ತವೆ.

ಈ ಯೋಜನೆಯಲ್ಲಿ ಮೂರು ಹಂತದ ಘಟಕ ವೆಚ್ಚವನ್ನು ಆಧರಿಸಿ ಸಹಾಯ ಧನವನ್ನು ನಿಗಧಿ ಪಡಿಸಲಾಗುತ್ತದೆ. ಘಟಕ ವೆಚ್ಚ 5.00 ಲಕ್ಷಗಳವರೆಗೆ ಶೇ.70 ಅಥವಾ 3.50 ಲಕ್ಷ ಸಹಾಯ ಧನ. ಘಟಕ ವೆಚ್ಚ ರೂ 5.00 ಲಕ್ಷದಿಂದ 10.00 ಲಕ್ಷಗಳವರೆಗೆ ಶೇ.60 ಅಥವಾ ಗರಿಷ್ಠ ರೂ.5.00ಲಕ್ಷ ಸಹಾಯ ಧನ. ಘಟಕ ವೆಚ್ಚ ರೂ 10.00 ಲಕ್ಷದಿಂದ 20.00 ಲಕ್ಷಗಳವರೆಗೆ ಶೇ.50 ಅಥವಾ ಗರಿಷ್ಠ ರೂ.5.00ಲಕ್ಷ ಸಹಾಯ ಧನ.

ನಿಗಮದ ಸಹಾಯಧನವನ್ನು ಹೊರತು ಪಡಿಸಿ ಘಟಕ ವೆಚ್ಚದ ಉಳಿದ ಭಾಗವನ್ನು ಬ್ಯಾಂಕ್ ಸಾಲದಿಂದ ಭರಿಸಲಾಗುವುದು. ಈ ಯೋಜನೆಯನ್ನು ಪಡೆಯಲು ಅರ್ಜಿದಾರರು 21 ರಿಂದ 50 ವರ್ಷದವರೆಗಿನ ವಯೋಮಾನದವರಾಗಿರಬೇಕು. ವಾರ್ಷಿಕ ವರಮಾನ ರೂ.50000 ಗ್ರಾಮೀಣ ಹಾಗೂ 2 ಲಕ್ಷ ನಗರ ಪ್ರದೇಶವರಿಗೆ ಮಿತಿಯೊಳಗಿರಬೇಕು. ಹಾಗೇ ಹಲವಾರು ಅರ್ಹತೆಗಳನ್ನು ಹೊಂದಿರಬೇಕು. ಇದರಲ್ಲಿ ಪ್ರಮುಖವಾದ ಯೋಜನೆಗಳೆಂದರೆ ಹೈನುಗಾರಿಕೆ ಮತ್ತು ಉದ್ಯಮಶೀಲತಾ ಅಭಿವೃದ್ಧಿ ಯೋಜನೆ ಪ್ರಮುಖವಾಗಿದೆ.

**ಹೈನುಗಾರಿಕೆ ಯೋಜನೆ (ಸುಧಾರಿತ ತಳಿಯ ಎಮ್ಮೆ/ಮಿಶ್ರತಳಿಯ ಹಸುಗಳು)**

ರಾಷ್ಟ್ರೀಯ ಪರಿಶಿಷ್ಟಜಾತಿ ಹಣಕಾಸು ಅಭಿವೃದ್ಧಿ ನಿಗಮ ನವದೆಹಲಿ ಸಹಯೋಗದೊಡನೆ ಆರ್ಥಿಕ ನೆರವನ್ನು ನೀಡಲಾಗುತ್ತಿದೆ. ಘಟಕ ವೆಚ್ಚ ರೂ.5,80,500/–ಕ್ಕೆ ಪ್ರತಿದಿನ 12 ಲೀಟರ್ ಹಾಲು ಕರೆಯುವ ಎರಡು ಮಿಶ್ರ ತಳಿ ಹಸುಗಳು / ಸುಧಾರಿತ ತಳಿಗೆ ಸೇರಿದ ಎರಡು ಎಮ್ಮೆಗಳಿಗೆ ಆರ್ಥಿಕ ನೆರವು ನೀಡಲಾಗುವುದು.

**ಉದ್ಯಮಶೀಲತಾ ಅಭಿವೃದ್ಧಿ ಯೋಜನೆ**

ನಿಗಮವು ಈ ಯೋಜನೆಯನ್ನು ರಾಷ್ಟ್ರೀಕೃತ, ಶೆಡ್ಯೂಲ್ಡ್, ಗ್ರಾಮೀಣ ಬ್ಯಾಂಕುಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯು ಮೂರು ಹಂತದ ಘಟಕ ವೆಚ್ಚಗಳ ಸಾಲ ಯೋಜನೆಯಾಗಿದೆ. 1ನೇ ಘಟಕ ವೆಚ್ಚ 1 ಲಕ್ಷದಿಂದ 5 ಲಕ್ಷದವರೆಗೆ ಸಹಾಯಧನ ಶೇ.75 ಗರಿಷ್ಠ ರೂ 3.50 ಲಕ್ಷಗಳು, ಉಳಿದ ಭಾಗ ಬ್ಯಾಂಕ್ ಸಾಲವಾಗಿರುತ್ತದೆ. 2ನೇ ಘಟಕ ವೆಚ್ಚ 5 ಲಕ್ಷದಿಂದ 10 ಲಕ್ಷಗಳವರೆಗೆ ಸಹಾಯ ಧನ ಶೇ.60, ಗರಿಷ್ಠ ರೂ 5 ಲಕ್ಷಗಳು. 3ನೇ ಘಟಕ ವೆಚ್ಚ 10ಲಕ್ಷಗಳಿಂದ 20 ಲಕ್ಷಗಳ ವರೆಗೆ ಸಹಾಯಧನ. ಹೀಗೆ ಮೂರು ರೀತಿಯ ಘಟಕ ವೆಚ್ಚದ ಸಾಲಗಳಾಗಿರುತ್ತದೆ.

ಇದರಲ್ಲಿ ಚಪ್ಪಲಿ ಅಂಗಡಿ, ಬ್ಯೂಟಿ ಪಾರ್ಲರ್, ಸಾಫ್ಟ್ ಡ್ರಿಂಕ್ಸ್ ಘಟಕ, ದಿನಸಿ ಅಂಗಡಿ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ವಕೀಲ ಕಛೇರಿ, ಸಿಮೆಂಟ್, ಇಟ್ಟಿಗೆ ತಯಾರಿಕೆ, ಇತರೆ ಯಾವುದೇ ಲಾಭದಾಯಕ ಸಣ್ಣ ಕೈಗಾರಿಕೆ / ಸೇವಾ ಘಟಕ / ವ್ಯಾಪಾರ ಉದ್ದಿಮೆ ಪ್ರಾರಂಭಿಸಲು ಅನುಕೂಲವಾಗಿದೆ.

**ಗಂಗಾ ಕಲ್ಯಾಣ ಯೋಜನೆ**

ಈ ಯೋಜನೆಯಡಿ ಪರಿಶಿಷ್ಟ ಜಾತಿಗೆ ಸೇರಿದ ಒಂದೇ ಕಡೆ ಜಮೀನು ಹೊಂದಿದ್ದು ಸಣ್ಣ ಮತ್ತು ಅತೀಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಇದರಲ್ಲಿ ಎರಡು ರೀತಿಯ ಯೋಜನೆಗಳಿರುವುದನ್ನು ಕಾಣಬಹುದು. ಅವುಗಳೆಂದರೆ,

- ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ
- ಸಾಮೂಹಿಕ ನೀರಾವರಿ / ಏತ ನೀರಾವರಿ ಯೋಜನೆ

**ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ**

ಒಂದೂವರೆ ಎಕರೆಯಿಂದ ಐದು ಎಕರೆಯವರೆಗೆ ಜಮೀನು ಹೊಂದಿರುವ ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆ ನೀರಾವರಿ ಸೌಲಭ್ಯ ಒದಗಿಸಲು ಜಮೀನಿನಲ್ಲಿ ಕೊಳವೆ ಬಾವಿ / ತೆರೆದ ಬಾವಿ ಕೊರೆಸಿ, ಪಂಪ್ ಸೆಟ್ ಅಳವಡಿಸಿ, ವಿದ್ಯುಧ್ಧೀಕರಣಗೊಳಿಸಲಾಗುವುದು. ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಕೊಡಗು, ಚಿಕ್ಕಮಗಳೂರು, ಹಾಸನ ಹಾಗೂ ಉತ್ತರಕನ್ನಡ ಜಿಲ್ಲೆಗಳಲ್ಲಿ ಕನಿಷ್ಠ ಮಿತಿ 1.00 ಎಕರೆ ಹೊಂದಿರಬೇಕು.

**ಸಾಮೂಹಿಕ ನೀರಾವರಿ / ಏತ ನೀರಾವರಿ ಯೋಜನೆ**

ಈ ಯೋಜನೆಯಡಿ ಪರಿಶಿಷ್ಟ ಜಾತಿಗೆ ಸೇರಿದ ಒಂದೇ ಕಡೆ ಜಮೀನು ಹೊಂದಿದ ಸಣ್ಣ ಮತ್ತು ಅತಿಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಇದರಲ್ಲಿ 8 ರಿಂದ 15 ಎಕರೆ ಜಮೀನಿನಲ್ಲಿ, 2 ರಿಂದ 3 ಕೊಳವೆ ಬಾವಿಗಳಷ್ಟು ಕೊರೆದು ಪಂಪ್‌ಸೆಟ್, ಪೈಪ್ ಲೈನ್ ಅಳವಡಿಸಿ ವಿದ್ಯುದ್ಧೀಕರಣಗೊಳಿಸಿ ಫಲಾನುಭವಿಗಳ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಈ ಯೋಜನೆಯಡಿ ಘಟಕ ವೆಚ್ಚದ ಪೂರ್ಣ ಮೊತ್ತವು ಸಹಾಯ ಧನವಾಗಿರುತ್ತದೆ.

ಈ ಮೇಲಿನ ಯೋಜನೆಗಳ ಮೂಲಕ ಗಂಗಾ ಕಲ್ಯಾಣ ಯೋಜನೆಯು ನಿಗಮದಿಂದ ಪರಿಶಿಷ್ಟ ಜಾತಿಯವರಿಗೆ ತುಂಬಾ ಸಹಾಯಕವಾಗಿದೆ.

**ಭೂ ಒಡೆತನ ಯೋಜನೆ**

ಪರಿಶಿಷ್ಟ ಜಾತಿಗೆ ಸೇರಿದ ಭೂರಹಿತ ಕೃಷಿ ಕಾರ್ಮಿಕರ ಕುಟುಂಬದ ಮಹಿಳೆಯವರಿಗೆ ಮಾತ್ರ ಈ ಯೋಜನೆಯಡಿ ಸೌಲಭ್ಯವನ್ನು ನೀಡಲಾಗುತ್ತದೆ. ಇದರಲ್ಲಿ ಘಟಕ ವೆಚ್ಚ ಗರಿಷ್ಠ ರೂ. 7.50ಲಕ್ಷ ಇದ್ದು, ಇದರಲ್ಲಿ ಶೇ.50 ಭಾಗ ಸಹಾಯ ಧನ ಹಾಗೂ ಶೇ.50 ಭಾಗ ಸಾಲದ ರೂಪದಲ್ಲಿ ಆರ್ಥಿಕ ನೆರವನ್ನು ನೀಡಲಾಗುವುದು. ರೂ.7.50 ಲಕ್ಷ ಘಟಕ ವೆಚ್ಚದ ಮಿತಿಯಲ್ಲಿ ಕನಿಷ್ಠ 2 ಎಕರೆ ಖುಷ್ಕಿ ಅಥವಾ ಕನಿಷ್ಠ 1 ಎಕರೆ ತರಿ/ಬಾಗಯ್ತು ಜಮೀನುಗಳನ್ನು ಅಥವಾ ಬಾಗಾಯ್ತು ಅರ್ಧ ಎಕರೆ (20ಗುಂಟೆ) ಕಡಿಮೆಯಿಲ್ಲದಂತೆ ಒದಗಿಸಲಾಗುವುದು. ಫಲಾನುಭವಿಯ ಸಾಲದ ಹಣವನ್ನು 10 ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು. ಇದಕ್ಕೆ ಬಡ್ಡಿದರ ಶೇ.6 ವಿಧಿಸಲಾಗುತ್ತದೆ. ಜಮೀನನ್ನು ಮಾರಾಟ ಮಾಡುವವರು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬಾರದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಸಮಿತಿಯು ದರ ನಿಗದಿಪಡಿಸುತ್ತದೆ.

ಈ ಯೋಜನೆಯನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನವದೆಹಲಿ ಇವರ ಸಹಯೋಗದೊಡನೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಇರಬೇಕಾದ ಅರ್ಹತೆಗಳೆಂದರೆ:

- ಪಲಾನುಭವಿ ಪರಿಶಿಷ್ಟ ಜಾತಿಯ ಭೂರಹಿತ ಕೃಷಿ ಕಾರ್ಮಿಕ ಕುಟುಂಬದ ಮಹಿಳಾ ಅಭ್ಯರ್ಥಿಯಾಗಿರಬೇಕು
- ನಿಗಮದಿಂದ ಈ ಹಿಂದೆ ಸಾಲ ಪಡೆದಿರಬಾರದು ಮತ್ತು ಸುಸ್ತಿದಾರರಾಗಿರಬಾರದು
- ಈ ಯೋಜನೆಯ ಸೌಲಭ್ಯ ಪಡೆಯಲು ಇಚ್ಚಿಸುವವರು ತಮ್ಮ ಗ್ರಾಮದ ಅಸುಪಾಸಿನಲ್ಲಿ ಜಮೀನು ಮಾರಾಟಕ್ಕಿದೆಯೋ ಎಂದು ವಿಚಾರಿಸಿಕೊಂಡು ಜಮೀನು ಮಾರಾಟ ಮಾಡಲು ಇಚ್ಚಿಸುವ ಮಾಲೀಕರ ವಿವರಗಳೊಂದಿಗೆ ನಿಗಮದ ಜಿಲ್ಲಾ ಕಛೇರಿಯನ್ನು ಸಂಪರ್ಕಿಸುವುದು

ಈ ಯೋಜನೆಗೆ ಆಯ್ಕೆಯಾಗುವ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆ ಭೂ ರಹಿತ ಪರಿಶಿಷ್ಟ ಜಾತಿಯ ಕುಟುಂಬಗಳು ವಾಸವಾಗಿರುವ ಗ್ರಾಮದ ಸುತ್ತಮುತ್ತಲ ಪ್ರದೇಶದಲ್ಲಿ ಕೃಷಿಗೆ ಯೋಗ್ಯವಾದ ಜಮೀನನ್ನು ಗುರುತಿಸಬೇಕು ಅಥವಾ ಜಮೀನು ದೊರಕುವ ಗ್ರಾಮದ 5 ಕಿ.ಮೀ. ವ್ಯಾಪ್ತಿಯಲ್ಲಿ ವಾಸವಾಗಿರುವ ಗ್ರಾಮ

ಸಭೆಯಲ್ಲಿ ಆಯ್ಕೆಯಾದ ಪರಿಶಿಷ್ಟ ಜಾತಿಯ ಭೂ ರಹಿತ ಕುಟುಂಬಗಳ ಪಟ್ಟಿಯನ್ನು ಶಾಸಕರ ಸಮಿತಿಗೆ ಮಂಡಿಸಿ ಅರ್ಹ ಫಲಾಪೇಕ್ಷಿಗಳನ್ನು ಆಯ್ಕೆ ಮಾಡಬೇಕು.

**ಮೈಕ್ರೋ ಕ್ರೆಡಿಟ್ ಯೋಜನೆ/ಮಹಿಳಾ ಸಮೃದ್ಧಿ ಯೋಜನೆ**

ಈ ಯೋಜನೆಯಡಿ ಗ್ರಾಮೀಣ, ಅರೆನಗರ ಮತ್ತು ನಗರ ಪ್ರದೇಶಗಳಿಗೆ ಸೇರಿದ ಕುಶಲ/ಕುಶಲವಲ್ಲದ ವ್ಯಕ್ತಿಗಳಿಗೆ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವಸಹಾಯ ಗುಂಪುಗಳ ಮೂಲಕ ಪ್ರತಿಯೊಬ್ಬ ಫಲಾಪೇಕ್ಷಿಗೆ ಗರಿಷ್ಠ ಮೊತ್ತ ರೂ.15000ಗಳನ್ನು ಮಂಜೂರು ಮಾಡಲಾಗುವುದು. ಇದರಲ್ಲಿ ರೂ.10000 ಸಹಾಯ ಧನ ಮತ್ತು ರೂ.5000ಗಳು ಬೀಜಧನ ಸಾಲವಾಗಿದ್ದು, ಇದನ್ನು ನಿಗಮದಿಂದಲೇ ನೇರವಾಗಿ ಮಂಜೂರು ಮಾಡಲಾಗುವುದು. ಈ ಯೋಜನೆಯಡಿ ಸ್ವಸಹಾಯ ಸಂಘಗಳ ಸದಸ್ಯರಲ್ಲದೆ ವೈಕ್ತಿಕ ಫಲಾನುಭವಿಗಳಿಗೂ ಲೌಸಭ್ಯ ಒದಗಿಸಲಾಗುವುದು. ಫಲಾನುಭವಿಗಳು ಬಿಪಿಎಲ್ ಕುಟುಂಬಗಳಿಗೆ ಸೇರಿದವರಾಗಿರಬೇಕು.

ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿ ಮಹಿಳೆಯರಿಗೆ ಗುಂಪು ಚಟುವಟಿಕೆಗಳ ಮೂಲಕ ಉತ್ಪಾದನಾ ಚಟುವಟಿಕೆಗಳನ್ನು ಆರಂಭಿಸಿ ಲಾಭಗಳಿಸಲು ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ನಿಗಮದಿಂದ ಸಹಾಯ ಧನ ಮತ್ತು ಸಾಲ ನೀಡಲು ಅವಕಾಶ ಮಾಡಿಕೊಡಲಾಗುತ್ತದೆ. ಆಯ್ಕೆಯಾದ ಕನಿಷ್ಠ 10 ಮಹಿಳೆಯರ ಸ್ವಸಹಾಯ ಗುಂಪನ್ನು ರೂಪಿಸುವುದು/ಹಾಲಿ ಅಸ್ತಿತ್ವದಲ್ಲಿರುವ ಮಹಿಳಾ ಸ್ವಸಹಾಯ ಗುಂಪಿಗೆ ಆರ್ಥಿಕ ಬೆಂಬಲವನ್ನು ನೀಡಲಾಗುವುದು. ಜಂಟಿ ಖಾತೆಯನ್ನು ಆರಂಭಿಸಿ ಉತ್ತಮ ಆದಾಯ ಗಳಿಸುವ, ಉತ್ಪಾದನಾ ಸೇವಾ ಘಟಕ ಆರಂಭಿಸಲು ರೂ.2.50 ಲಕ್ಷ ಸಹಾಯ ಧನವನ್ನು ಮಂಜೂರು ಮಾಡಲಾಗುವುದು. ಪ್ರತಿ ಸದಸ್ಯರಿಗೆ ರೂ.25.000ದಂತೆ ಹಣವನ್ನು ನಿಗಮ ಭರಿಸುತ್ತದೆ. ವ್ಯಾಪಾರ/ಉತ್ಪಾದನೆ/ಸೇವಾ ಚಟುವಟಿಕೆಗಳಲ್ಲಿ ಗಳಿಸುವ ಆದಾಯವನ್ನು ಸಮಾನಾಗಿ ಹಂಚಿಕೆ ಮಾಡಿಕೊಂಡು ಸ್ವಾವಲಂಬನೆಯನ್ನು ಹೊಂದುವುದು ಈ ಯೋಜನೆ ಮುಖ್ಯ ಉದ್ದೇಶವಾಗಿರುತ್ತದೆ.

ಈ ಯೋಜನೆಯಿಂದ ಬರುವ ಪ್ರಮುಖ ಆರ್ಥಿಕ ಚಟುವಟಿಕೆಗಳೆಂದರೆ ಕೃಷಿ ಆಧಾರಿತ ಚಟುವಟಿಕೆಗಳು, ಫಿನೈಲ್ ತಯಾರಿಕೆ, ಸಾಬೂನು ತಯಾರಿಕೆ, ಅಗರ ಬತ್ತಿ ತಯಾರಿಕೆ, ಸಣ್ಣ ಪ್ರಮಾಣದ ವ್ಯಾಪಾರ, ಇತ್ಯಾದಿ ಲಾಭದಾಯಕ ಚಟುವಟಿಕೆಗಳು.

**ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ**

ನಗರಾಭಿವೃದ್ಧಿ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಮುಖೇನ ಗುರುತಿಸಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಸಮಿತಿಯಿಂದ ಅನುಮೋದಿತವಾದ ಸಫಾಯಿ ಕರ್ಮಚಾರಿ ಮತ್ತು ಅದರ ಅವಲಂಬಿತರಿಗೆ ಈ ಯೋಜನೆಯಡಿ ಸಾಲ ಸೌಲಭ್ಯ ನೀಡಲಾಗುತ್ತಿದೆ. ಈ ಯೋಜನೆಯಡಿ ಸ್ವಯಂ ಉದ್ಯೋಗ ಚಟುವಟಿಕೆಗಳಾದ ಹೈನುಗಾರಿಕೆ, ಸಣ್ಣ ವ್ಯಾಪರ, ಸೈಕಲ್ ಶಾಪ್, ದಿನಸಿ ಅಂಗಡಿ, ಸಣ್ಣ ಕೈಗಾರಿಕೆ, ಸೇವೆ, ವ್ಯಾಪಾರ, ಸ್ಯಾನಿಟರ ಮಾರ್ಟ್ ಇತ್ಯಾದಿ ಚಟುವಟಿಕೆಗಳಿಗೆ (NSKFDC) ನವದೆಹಲಿ ಇವರ ಸಹಯೋಗದೊಂದಿಗೆ ಸಾಲ ಸೌಲಭ್ಯ ಒದಗಿಸಲಾಗುವುದು.

ರೂ.1.00 ಲಕ್ಷ ಮಿತಿಯ ಘಟಕಗಳಿಗೆ ಶೇ.50 ಭಾಗ ಅಥವಾ ಗರಿಷ್ಠ ರೂ.10,000 ಸಹಾಯ ಧನ ಮತ್ತು ಉಳಿದ ಮೊತ್ತ ಅವಧಿ ಸಾಲವಾಗಿರುತ್ತದೆ. ರೂ.1.00 ಲಕ್ಷ ಮೇಲ್ಪಟ್ಟ ಘಟಕಗಳಿಗೆ ಶೇ.5 ಭಾಗ ಅಂಚಿನ ಹಣ, ಶೇ.5 ಭಾಗ ಫಲಾನುಭವಿಯ ವಂತಿಕೆ ಮತ್ತು ಉಳಿದ ಭಾಗ ಅವಧಿ ಸಾಲವಾಗಿರುತ್ತದೆ. ಇದರಲ್ಲಿ ಆಟೋ, ಟ್ರ್ಯಾಕ್ಟರ್ ಮತ್ತು ಟ್ರೈಲರ್, ಸಾರಿಗೆ ವಾಹನ, ಸರಕು ಸಾಗಾಣಿಕೆ ವಾಹನ, ಸಕ್ಕಿಂಗ್ ಮೆಷಿನ್, ಕಸ ಸಾಗಾಣಿಕೆ ವಾಹನ, ಇತ್ಯಾದಿ., ಚಟುವಟಿಕೆಗಳಿಗೆ ಸಾಲ ಸೌಲಭ್ಯ ಒದಗಿಸಲಾಗುವುದು.

**ನೇರ ಸಾಲ ಯೋಜನೆ**

ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಅಭಿವೃದ್ಧಿ ನಿಗಮದ ಸಹಯೋಗದೊಡನೆ ನೇರ ಸಾಲವಾಗಿ ರೂ.1.00 ಲಕ್ಷದ ಮಿತಿಯೊಳಗಿನ ಘಟಕಗಳಿಗೆ ಶೇ.50ರಷ್ಟು ಅಥವಾ ಗರಿಷ್ಠ ರೂ 10,000 ಸಹಾಯ ಧನ ಹಾಗೂ ಉಳಿದ ಮೊತ್ತ ಅವಧಿ ಸಾಲವಾಗಿರುತ್ತದೆ. ರೂ. 1 ಲಕ್ಷ ಮೇಲ್ಪಟ್ಟ ಘಟಕಗಳಿಗೆ ಶೇ.5ರ ಬೀಜಧನ, ಶೇ.5ರ ಫಲಾನುಭವಿಗಳ ವಂತಿಕೆ ಹಾಗೂ ಉಳಿದ ಶೇ.90ರ ಅವಧಿ ಸಾಲದೊಂದಿಗೆ ಆರ್ಥಿಕ ನೆರವು ನೀಡಿ ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಯೋಜನೆಗೆ ಸಾಲ ಪಡೆಯಲು ಕೆಲವು ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ. ಅವುಗಳೆಂದರೆ, ಗುಂಪಿನ ಸದಸ್ಯರೆಲ್ಲರೂ ಸಫಾಯಿ ಕರ್ಮಚಾರಿ ಅಥವಾ ಅವರ ಅವಲಂಬಿತರಾಗಿರಬೇಕು. ಸಂಘ ಪ್ರಾರಂಭವಾಗಿ 5 ವರ್ಷಗಳಾಗಿರಬೇಕು. ಸ್ವಸಹಾಯ ಗುಂಪಿನಲ್ಲಿ ಕನಿಷ್ಠ 10 ಹಾಗೂ ಗರಿಷ್ಠ 20 ಸದಸ್ಯರ ಮಿತಿಯೊಳಗಿರಬೇಕು. ಹೀಗೆ ಹಲವಾರು ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ.

ಪರಿಶಿಷ್ಟ ಜಾತಿಯವರ ಕಲ್ಯಾಣಕ್ಕಾಗಿ ನಿಗಮದಿಂದ 2018–19ನೇ ಸಾಲಿನಲ್ಲಿ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಅವುಗಳೆಂದರೆ, ಸ್ಫೂರ್ತಿ ಯೋಜನೆ, ಸಮೃದ್ಧಿ ಯೋಜನೆ, ಐರಾವತ ಯೋಜನೆ, ಪ್ರೇರಣಾ ಯೋಜನೆ ಮುಂತಾದವು.

**ಸ್ಫೂರ್ತಿ ಯೋಜನೆ**

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವಕ/ಯುವತಿಯರಿಗೆ ತಮ್ಮ ಆಸಕ್ತಿ ಕ್ಷೇತ್ರಗಳಲ್ಲಿ ಇರುವ ಪ್ರತಿಭೆಯನ್ನು ತರಬೇತಿಯ ಮೂಲಕ ವೃದ್ಧಿಗೊಳಿಸಿ ಸ್ಫೂರ್ತಿದಾಯಕ ವೃತ್ತಿ ಆರಂಭಿಸಿ ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣದ ಉದ್ದೇಶಕ್ಕಾಗಿ ಸ್ಫೂರ್ತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ರಾಷ್ಟ್ರ/ರಾಜ್ಯ ಮಟ್ಟದ ಬ್ರಾಂಡೆಡ್ ಕ್ರೀಡೆ ಮತ್ತು ಸೇವಾ ಕ್ಷೇತ್ರದ ತರಬೇತಿ ಸಂಸ್ಥೆಗಳ ಸಹಯೋಗದಲ್ಲಿ ಟೆನ್ನಿಸ್ ಕೋರ್ಟ್ ತರಬೇತಿ, ಟೆನ್ನಿಸ್ ಮಾರ್ಕರ್‌ಲ್/ಗ್ರೌಂಡ್ ಮನ್ ತರಬೇತಿ, ಸ್ವಿಂಮ್ಮಿಂಗ್ ಫುಲ್ ಅಪರೇಟರ್, ಬ್ಯಾಡ್ ಮಿಂಟನ್ ಕೋಚ್ ತರಬೇತಿ, ಕ್ರಿಕೆಟ್ ಕೋಚ್ ಮತ್ತು ಅಂಪೈರ್ ತರಬೇತಿ, ಫಿಟ್‌ನೆಸ್ ಕೋಚ್ ತರಬೇತಿ ಮುಂತಾದವುಗಳು. ಇವುಗಳಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿಯ ಪೂರ್ಣ ವೆಚ್ಚವನ್ನು ನಿಗಮದ ಮೂಲಕ ಭರಿಸಲಾಗುತ್ತದೆ.

**ಸಮೃದ್ಧಿ ಯೋಜನೆ**

ಗ್ರಾಮೀಣ/ನಗರ ಪ್ರದೇಶಗಳಲ್ಲಿನ ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವಕ/ಯುವತಿಯರನ್ನು ಉದ್ಯಮಶೀಲರನ್ನಾಗಿಸಲು ಸಮೃದ್ಧಿ ಯೋಜನೆ ಅನುಷ್ಠಾನಗೊಳಿಸುವ ಉದ್ದೇಶಿಸಿದೆ. ಉತ್ತಮ ಮಾರುಕಟ್ಟೆ ಹೊಂದಿರುವ ಸರ್ಕಾರಿ ಮತು ಖಾಸಗಿ ಬ್ರಾಂಡೆಡ್ ಸಂಸ್ಥೆಗಳ ಸಹಯೋಗದಲ್ಲಿ ಫ್ರಾಂಚೈಸಿ/ಡೀಲರ್ ಶೀಪ್ ವ್ಯವಸ್ಥೆಯೊಂದಿಗೆ ರೀಟೈಲ್ ವ್ಯಾಪಾರಿ ಮಳಿಗೆಗಳನ್ನು ಆರಂಭಿಸಲು ಅಗತ್ಯವಾದ ತಾಂತ್ರಿಕ ಬೆಂಬಲ ಹಾಗೂ ಆರ್ಥಿಕ ಬೆಂಬಲ ನೀಡಿ ಯಶಸ್ವಿ ಉದ್ದಿಮೆದಾರರನ್ನಾಗಿ ಮಾಡುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

**ಐರಾವತ ಯೋಜನೆ**

ಲಘುವಾಹನ ಚಾಲನ ಪರವನಾಗಿ ಹೊಂದಿರುವ ಪರಿಶಿಷ್ಟ ಜಾತಿಯ ನಿರುದ್ಯೋಗಿ ವಿದ್ಯಾವಂತ ಯುವಕ/ಯುವತಿಯರಿಗೆ ಪ್ರವಾಸಿ ಟ್ಯಾಕ್ಸಿಗಳ ಮಾಲೀಕರನ್ನಾಗಿ ಮಾಡಿ ಓಲಾ, ಉಬೇರ್, ಮೇರು ಸಂಸ್ಥೆಗಳ ಸಹಯೋಗದಲ್ಲಿ ಅತಿ ಹೆಚ್ಚು ಆದಾಯ ಪಡೆಯುವ 'ಐರಾವತ ಯೋಜನೆ' ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಈ ಯೋಜನೆಗೆ ಗರಿಷ್ಠ ರೂ.5.00 ಲಕ್ಷಗಳವರೆಗೆ ನಿಗಮದಿಂದ ಸಹಾಯಧನ ಒದಗಿಸಲಾಗುತ್ತದೆ.

**ಪ್ರೇರಣಾ ಯೋಜನೆ (ಬ್ಯೂಟಿ ಮತ್ತು ವೆಲ್‌ನೆಸ್ ಕೇಂದ್ರಗಳು)**

ನಿಗಮದಿಂದ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣ ಉದ್ದೇಶಕ್ಕಾಗಿ 'ಪ್ರೇರಣಾ ಯೋಜನೆ'ಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವತಿಯರಿಗೆ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ನಿಗಮದಿಂದ ಸಹಾಯ ಧನ ನೀಡಲು ಅವಕಾಶ ಮಾಡಿಕೊಡಲಾಗುತ್ತದೆ. ರಾಷ್ಟ್ರ/ರಾಜ್ಯ ಮಟ್ಟದ ಬ್ರಾಂಡೆಡ್ ತರಬೇತಿ ಸಂಸ್ಥೆಗಳ ಸಹಯೋಗದಲ್ಲಿ ಬ್ಯೂಟಿ ಮತ್ತು ವೆಲ್‌ನೆಸ್ ಕೇಂದ್ರಗಳನ್ನು ಸ್ಥಾಪಿಸಿ ಪರಿಶಿಷ್ಟ ಜಾತಿಯ ಯುವತಿಯರಿಗೆ ನಿಗಮದಿಂದ ತರಬೇತಿ ಹಾಗೂ ಉದ್ಯೋಗ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಆಯ್ಕೆಯಾದ ಪ್ರತಿ ಫಲಾನುಭವಿಗೆ ಗರಿಷ್ಠ ರೂ.10.00 ಲಕ್ಷಗಳ ವರೆಗೆ ಆರ್ಥಿಕ ಬೆಂಬಲ ನೀಡಲಾಗುವುದು.

**ಉಪಸಂಹಾರ**

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ಸಮಾಜ ಕಲ್ಯಾಣ ಇಲಾಖೆಯ ಅಂಗಸಂಸ್ಥೆಯ ನಿರ್ದೇಶನಕ್ಕನುಗುಣವಾಗಿ ಪರಿಶಿಷ್ಟ ಜಾತಿಯವರ ಸಬಲೀಕರಣಕ್ಕೆ ಮೇಲಿನ ಯೋಜನೆಗಳ ಮೂಲಕ ಸಹಕಾರಿಯಾಗಿರುವುದನ್ನು ಕಾಣಬಹುದು. ಪರಿಶಿಷ್ಟ ಜಾತಿಯವರು ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ಅನುಭವಿಸಿದ ಕಷ್ಟಗಳನ್ನು ಗಮನಿಸಿದಾಗ ಅಂದಿನ ಪರಿಸ್ಥಿತಿ ಹಾಗೂ ಇಂದಿನ ಪರಿಸ್ಥಿತಿಯಲ್ಲಿ ಸಾಕಷ್ಟು ವ್ಯಾತ್ಯಾಸಗಳಿರುವುದನ್ನು ಕಾಣಬಹುದಾಗಿದೆ. ಬಿ.ಆರ್.ಅಂಬೇಡ್ಕರ್‌ರವರ ಬಯಸಿದಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೂ ಸಮಾನತೆ ದೊರಕುವಂತಾಗಬೇಕು ಎಂಬ ಅವರ ಆಶಯ ಫಲಪ್ರದವಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು.

## ಪರಾಮರ್ಶನ ಗ್ರಂಥಗಳು


- ಆರಾಧ್ಯ ಬಿ.ಎಂ. (1955). ಪರಿಶಿಷ್ಟ ಜನಾಂದವರಿಗೆ ಸಂವಿಧಾನದ ಕೊಡುಗೆಗಳು. ಅಪ್ಪು ಪ್ರಕಾಶನ, ಬೆಂಗಳೂರು.
- ಚಂದ್ರಶೇಖರ್ ಟ.ಆರ್. (2014). ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ. ಗಾಯಿತ್ರಿ ಪ್ರಕಾಶನ, ಬಳ್ಳಾರಿ.
- ಇತೇಶ್ ಮುಲಹಕ್ (ಮುಖ್ಯ ಸಂಪಾದಕರು). (2015). ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.
- ಕ್ರಿಯಾ ಯೋಜನೆ. (2017). ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
- ದಿವಾಕರ ನಾ. (ಅನು) (2013). ಜಾಗತೀಕರಣ ಮತ್ತು ದಲಿತರು. (ಮೂಲ) ಆನಂದ್ ತೇಲ್ತುಂಬ್ಡೆ. ಲಡಾಯಿ ಪ್ರಕಾಶನ, ಗದಗ.
- ಪ್ರಗತಿ ವರದಿ. (2016). ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
- ಶೈಲಜ ಕೆ. (2014). ಪರಿಶಿಷ್ಟ ಜಾತಿ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಮಾನವಶಾಸ್ತ್ರ ವಿಭಾಗ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.
- Sachdeva. (2005). Social welfare administration in India. Kitab Mahal Allahabad.
- Schemes details. (2020).Dr.B.R.Ambedkar development corporation, Bengaluru. data retrieved from http://adcl.karnataka.gov.in/en/self_employment.html on April 22, 2020.